# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ



**ಅ**

| | | | |
|---|---|---|---|
| I | 1) ಚದರಡಿ 1ಕ್ಕೆ ಮಾರ್ಗಸೂಚಿ ಬೆಲೆ ರೂ.3,500/- ರಂತೆ 483 ಚದರಡಿಗಳಿಗೆ (ಕಮರ್ಷಿಯಲ್) | – 16,90,500=00 | |
| | 2) ಚದರಡಿ 1ಕ್ಕೆ ಮಾರ್ಗಸೂಚಿ ಬೆಲೆ ರೂ.2,500/- ರಂತೆ 486 ಚದರಡಿಗಳಿಗೆ (ಕಮರ್ಷಿಯಲ್) | – 12,15,000=00 | : ರೂ. 29,05,500=00 |
| II | ಶೇಕಡ 30 ರಂತೆ ಸಲೋಷಿಯಂ ವೆಚ್ಚ | | ರೂ. 8,71,650=00 |
| III | ಶೇ.12 ರಂತೆ ಹೆಚ್ಚುವರಿ ಮಾರುಕಟ್ಟೆ ದರ (1 ವರ್ಷಕ್ಕೆ) | | ರೂ. 3,48,660=00 |
| | ಒಟ್ಟು | | 41,25,810=00 |

**ಆ**

| | | |
|---|---|---|
| 1) ಶೇ.10 ರಷ್ಟು ಆಡಳಿತ ವೆಚ್ಚ | ; | 4,12,581=00 |
| 2) ಶೇ.1 ರಷ್ಟು ಆಡಿಟ್ ವೆಚ್ಚ | : | 41,258=00 |
| 3) ಪ್ರಕಟಣಾ ವೆಚ್ಚ | : | 2,00,000=00 |
| ಒಟ್ಟು | | 6,53,839=00 |

**ಅ+ಆ ರ ಒಟ್ಟು ಮೊತ್ತ : ರೂ. 47,79,649=00**

(ನಲವತ್ತೇಳು ಲಕ್ಷ ಎಪ್ಪತ್ತೊಂಭತ್ತು ಸಾವಿರದ ಆರು ನೂರ ನಲವತ್ತೊಂಭತ್ತು ರೂಪಾಯಿಗಳು ಮಾತ್ರ)

ಭೂ-ಸ್ವಾಧೀನ ಕಾಯ್ದೆಯಡಿಯನ್ವಯ ಸುಮಾರು 969 ಚ.ಅ. ಜಾಗವನ್ನು ಭೂ ಸ್ವಾಧೀನಪಡಿಸಿಕೊಂಡು, ಸ್ವತ್ತಿನ ಮಾಲೀಕರಿಗೆ ಒಟ್ಟು ರೂ47,79,649=00 ಗಳ ಪರಿಹಾರವನ್ನು ನೀಡುವಲ್ಲಿ ಸೂಕ್ತ ತೀರ್ಮಾನ ಕೈಗೊಳ್ಳಲು ಮಾನ್ಯ ಆಡಳಿತಗಾರರ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:10/07/2008 ರ ಟಿಪ್ಪಣಿ.

<u>ತೀರ್ಮಾನ:</u> ಆಯುಕ್ತರವರ ದಿನಾಂಕ:10/07/2008 ರ ಟಿಪ್ಪಣಿಯನ್ನು ಒಪ್ಪಿದೆ.

(ದಿಲೀಪ್ ರಾವ್)
ಆಡಳಿತಗಾರರು

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ಅಧಿಕಾರಗಳನ್ನು ಚಲಾಯಿಸಿ ಆಡಳಿತಗಾರರ ದಿನಾಂಕ:22/07/2008 ರ ನಡವಳಿಗಳು

ವಿಷಯದ ಸಂಖ್ಯೆ:348/2008-09

ಬಳ್ಳಾರಿ ರಸ್ತೆಯ ಸಿ.ಬಿ.ಐ. ಜಂಕ್ಷನ್ ಬಳಿ ನಿರ್ಮಾಣವಾಗುತ್ತಿರುವ ಸಬ್ ವೇ ಕಾಮಗಾರಿಗೆ ತಾತ್ಕಾಲಿಕ ಬೆಳಕಿನ ವ್ಯವಸ್ಥೆಯನ್ನು ಕಲ್ಪಿಸುವ ಕಾಮಗಾರಿಯನ್ನು ತುಂಡುಗುತ್ತಿಗೆ ಆಧಾರದ ಮೇಲೆ ತೆಗೆದುಕೊಳ್ಳುವ ಬಗ್ಗೆ.

ಪ್ರಸ್ತಾವನೆ:

ಬಳ್ಳಾರಿ ರಸ್ತೆಯ ಸಿ.ಬಿ.ಐ. ಜಂಕ್ಷನ್ ಬಳಿ ನಿರ್ಮಾಣವಾಗುತ್ತಿರುವ ಸಬ್ ವೇ ಕಾಮಗಾರಿಗೆ ತಾತ್ಕಾಲಿಕ ಬೆಳಕಿನ ವ್ಯವಸ್ಥೆಯನ್ನು ಕಲ್ಪಿಸುವ ಕಾಮಗಾರಿಯನ್ನು ಸ.ಕಾ.ನಿ.ಅ (ಅಂಡರ್‌ಪಾಸ್ ಸ್ಪೆಷಲ್ ಸೆಲ್) ರವರ ಕೋರಿಕೆಯ ಮೇರೆಗೆ ತೆಗೆದುಕೊಳ್ಳಲಾಗಿರುತ್ತದೆ.

ಸದರಿ ಕಾಮಗಾರಿಯನ್ನು ಅತೀ ತುರ್ತಾಗಿ ನಿರ್ವಹಿಸಬೇಕಾಗಿರುವುದರಿಂದ ದಿನಾಂಕ:02/05/2008 ರಲ್ಲಿ ಕೊಟೇಷನ್ ಆಹ್ವಾನಿಸಲಾಗಿದ್ದು, ಅತೀ ಕಡಿಮೆ ದರ ನಮೂದಿಸಿರುವ ಗುತ್ತಿಗೆದಾರರಾದ ಮೆ॥ ಸಪ್ತಗಿರಿ ಎಂಟರ್ ಪ್ರೈಸಸ್ ರವರಿಂದ ತುಂಡುಗುತ್ತಿಗೆ ಆಧಾರದ ಮೇಲೆ ಕಾಮಗಾರಿಗಳನ್ನು ಕೈಗೊಳ್ಳಲು ಉದ್ದೇಶಿಸಲಾಗಿರುತ್ತದೆ ಹಾಗೂ ಸದರಿ ಗುತ್ತಿಗೆದಾರರು ನಮೂದಿಸಿರುವ ದರಗಳನ್ನು ಅಳವಡಿಸಿಕೊಂಡು ರೂ.4,99,890/- ಗಳಿಗೆ ಅಂದಾಜು ಪಟ್ಟಿಯನ್ನು ತಯಾರಿಸಲಾಗಿರುತ್ತದೆ. ಈ ಅಂದಾಜು ಪಟ್ಟಿಯಲ್ಲಿ ಜನರೇಟರ್ ಸೆಟ್, ಎಸ್.ವಿ.ಎಂ.ಹೆಚ್. ದೀಪಗಳು, ವೈಯರ್ ಮತ್ತು ಲ್ಯಾಡರ್ ಜೀಪನ್ನು 60 ದಿನಗಳಿಗೆ ಅಳವಡಿಸುವುದನ್ನು ಸೇರಿಸಿಕೊಳ್ಳಲಾಗಿದೆ.

ಈ ಮೇಲ್ಕಂಡ ಅಂಶಗಳ ಹಿನ್ನೆಲೆಯಲ್ಲಿ, ಬಳ್ಳಾರಿ ರಸ್ತೆಯ ಸಿ.ಬಿ.ಐ ಜಂಕ್ಷನ್ ಬಳಿ ನಿರ್ಮಾಣವಾಗುತ್ತಿರುವ ಸಬ್ ವೇ ಕಾಮಗಾರಿಗೆ ತಾತ್ಕಾಲಿಕ ಬೆಳಕಿನ ವ್ಯವಸ್ಥೆಯನ್ನು 60 ದಿನಗಳಿಗೆ ಕಲ್ಪಿಸುವ ಕಾಮಗಾರಿಯನ್ನು ತುಂಡುಗುತ್ತಿಗೆ ಆಧಾರದ ಮೇಲೆ ಮೆ॥ ಸಪ್ತಗಿರಿ ಎಂಟರ್ ಪ್ರೈಸಸ್ ರವರಿಂದ ನಿರ್ವಹಿಸಲು ಹಾಗೂ ಕಾಮಗಾರಿ ಪೂರ್ಣಗೊಂಡ ನಂತರ ಸದರಿ ಗುತ್ತಿಗೆದಾರರಿಂದ ಡಿ.ಸಿ.ಬಿಲ್ ಮುಖಾಂತರ ಹಣವನ್ನು ಪಾವತಿಸುವ ಬಗ್ಗೆ ಅನುಮೋದನೆ ಕೋರಿ ಮಾನ್ಯ ಆಡಳಿತಗಾರರ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:11/07/2008 ರ ಟಿಪ್ಪಣಿ.

ತೀರ್ಮಾನ: ಆಯುಕ್ತರವರ ದಿನಾಂಕ:11/07/2008 ರ ಟಿಪ್ಪಣಿಯನ್ನು ಒಪ್ಪಿದೆ.

(ದಿಲೀಪ್ ರಾವ್)
ಆಡಳಿತಗಾರರು

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಅಧಿಕಾರಗಳನ್ನು ಚಲಾಯಿಸಿ ಆಡಳಿತಗಾರರ ದಿನಾಂಕ:22/07/2008 ರ ನಡವಳಿಗಳು

ವಿಷಯದ ಸಂಖ್ಯೆ:349/2008–09

Administrative approval for Sinking of borewell providing and submersible pump and motor and Providing UGD facilities in Dasarahalli Zone.ರ ಕಾಮಗಾರಿ ಬಗ್ಗೆ.

ಪ್ರಸ್ತಾವನೆ:

Administrative approval for Sinking of borewell providing and submersible pump and motor and Providing UGD facilities in Dasarahalli Zone.ರ ಕಾಮಗಾರಿಗೆ ಮಾನ್ಯ ಆಯುಕ್ತರವರು ಅನುಮೋದನೆ ನೀಡಿರುತ್ತಾರೆ. ಈ ಕಾಮಗಾರಿಗಳನ್ನು 2008–09 ಆಯವ್ಯಯ ಪಟ್ಟಿಯಲ್ಲಿ ಯು.ಜಿ.ಡಿ/ನೀರು ಸರಬರಾಜು ಹೊಸ ಪ್ರದೇಶಗಳು ಇದರ ಅನುದಾನದಲ್ಲಿ ತೆಗೆದುಕೊಳ್ಳಲಾಗುತ್ತದೆ. ಈ ಕೆಳಕಂಡ 19 ಕಾಮಗಾರಿಗಳ ಒಟ್ಟು ಮೊತ್ತ 547.00 ಲಕ್ಷಗಳಾಗಿದ್ದು ಆಡಳಿತಾತ್ಮಕ ಅನುಮೋದನೆ ಬೇಕಾಗಿರುತ್ತದೆ.

| Sl. No. | Sub Division | Name of Work | No of Borewell | Estimate Cost |
|---|---|---|---|---|
| 1 | Dasarahalli | Detailed estimate for Drilling of borewell, providing cistern for storage of Water for Abbigere Village in Dasarahalli Sub-Division. | 15 | 49.5 |
| 2 | Bagalagunte | Detailed estimate for Drilling of Borewell Providing cistern for storage of Water at Shettihalli village in Bagalagunte Sub Division. | 10 | 34.00 |
| 3 | Bagalagunte | Detailed estimate for Drilling of Borewell providing cistern for storage of Water at Medarahalli village in Bagalagunte Sub Division. | 10 | 34.00 |
| 4 | Bagalagunte | Detailed estimate for the work of Drilling of Borewells providing cistern for storage of Water at Sidedahalli village in Bagalagunte Sub Division. | 10 | 34.00 |
| 5 | Bagalagunte | Detailed estimate for Drilling of borewell, providing cistern for storage of Water at Chikkasandra village in Bagalagunte Sub Division. | 10 | 34.00 |
| 6 | Chokkasandra | Detailed estimate for sinking of Borewell and supply of Submersible pump and motor and Accessories and Electrification at Thippenahalli village limit in Chokkasandra Sub-Division. | 6 | 36.60 |

. . . 2

| | | | | |
|---|---|---|---|---|
| 7 | Chokkasandra | Detailed estimate for sinking of Borewell and supply of Submersible pump and motor and Accessories and Electrification Chennanayakana playa Mysore layout Muniswamappa badavane Muneshwara badavane Bahavaninagara in Chokkasandra Sub-Division. | 4 | 25.00 |
| 8 | Chokkasandra | Detailed estimate for sinking of Borewell and supply of Submersible pump and motor and Accessories and Electrification at Doddabidarakallu Wipro layout suvarnanagara GM cottage indranagara Byraweshwaranagara Chokkasandra Sub-Division. | 9 | 47.30 |
| 9 | Herohalli | Detailed estimate for drilling of Borewells providing and fixing of Submersible pump and motor Electrification necessary accessories at Behind Shanimahathma temple Herohalli in front of Anjenya Swamy Temple Herohalli Mahadesh-waranagara Maruthinagara KSRTC badavane BTS badavane in herohalli Sub-Division. | 6 | 25.00 |
| 10 | Herohalli | Detailed estimate for drilling of Borewells providing and fixing of Submersible pump and motor Electrification necessaries accessories at survey No.7 Maruthinagara , Thunga nagara Pipe line road Mahadeshwaranagara Kempegowdanagara Anjaneyanagara Behind Sappina Katte Bhayadarahalli in Herohalli Sub-Division. | 6 | 25.00 |
| 11 | Herohalli | Detailed estimate for drilling of borewells providing and fixing of Submersible pump and motor Electrification necessaries accessories near pipe line Hosahalli Gollarapalya Balajinagara Govt School at Bydarahalli Govt School at Bilekallu Muneshwaranagara near CII road Kuvempu nagara Anjananagara in Herohalli. | 6 | 25.00 |
| 12 | Nelagadaranahalli | Detailed estimate for sinking of borewells and supply of Submersible pump motors with Accessories at Thigalarapalya (AK colony) old Village and Andrahalli old village in Nelagadaranahalli Sub-Division | 6 | 23.00 |

. . . 3

| | | | | |
|---|---|---|---|---|
| 13 | Nelagadaranahalli | Detailed estimate for Sinking of Borewell and supply of Submersible pump motors with Accessories at Thigalarapalya area in Nelagadaranahalli Sub-Division | 10 | 40.00 |
| 14 | Nelagadaranahalli | Detailed estimate for Sinking of Borewell and supply of Submersible pump motors with Accessories at Karihobanahalli, Andrahalli new layout (Kalikanagara Shiradisainagara Srichakranagara) and Vidyama-nagara in Nelagadaranahalli Sub-Division | 10 | 40.00 |
| 15 | Dasarahalli | Detailed estimate for UGD pipe lines in Dasarahalli Sub-Division. | - | 15.00 |
| 16 | Dasarahalli | Detailed estimate for UGD pipe lines in Kammagondanahalli AK colony area in Dasarahalli Sub-Division. | - | 25.00 |
| 17 | Dasarahalli | Detailed estimate for UGD pipe lines in Abbigere Village in Dasarahalli Sub-Division. | - | 15.00 |
| 18 | Herohalli | Detailed estimate for Repairs of UGd pipe lines in Annual Maintenance in Herohalli sub-Division. | - | 5.00 |
| 19 | Chokkasandra | Detail Estimate for Replacing and Reconstruction of Sanitary pipeline and manhole at Chokkansandra Sub-Division. | - | 15.00 |
| | | | **Total** | **547.00** |

ಈ ಹಿನ್ನೆಲೆಯಲ್ಲಿ ಕಾಮಗಾರಿಯ ಒಟ್ಟು ಮೊತ್ತವು 547.00 ಲಕ್ಷಗಳಾಗಿದ್ದು ಸದರಿ ಕಾಮಗಾರಿಗೆ ಆಡಳಿತಾತ್ಮಕ ಮಂಜೂರಾತಿಯನ್ನು ಕೋರಿ ಮಾನ್ಯ ಆಡಳಿತಗಾರರ ಮುಂದೆ ಮಂಡಿಸಿರುವ ಅಯುಕ್ತರವರ ದಿನಾಂಕ:17/07/2008 ರ ಟಿಪ್ಪಣಿ.

<u>ತೀರ್ಮಾನ:</u> ಅಯುಕ್ತರವರ ದಿನಾಂಕ:17/07/2008 ರ ಟಿಪ್ಪಣಿಯನ್ನು ಒಪ್ಪಿದೆ.

(ದಿಲೀಪ್ ರಾವ್)
ಆಡಳಿತಗಾರರು

**ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಅಧಿಕಾರಗಳನ್ನು ಚಲಾಯಿಸಿ ಆಡಳಿತಗಾರರ ದಿನಾಂಕ:22/07/2008 ರ ನಡವಳಿಗಳು**

**ವಿಷಯ ಸಂಖ್ಯೆ:350/2008–09**

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಹಾಗೂ ನೈಟಿಂಗೇಲ್ಸ್ ಮೆಡಿಕಲ್ ಟ್ರಸ್ಟ್ ಸಹಭಾಗಿತ್ವದಿಂದ ನಡೆಸುತ್ತಿರುವ ಸಂಧ್ಯಾಕಿರಣ ಹಗಲು ನಿರೀಕ್ಷಣಾ ಕೇಂದ್ರವನ್ನು ಮುಂದುವರೆಸುವ ಬಗ್ಗೆ.

**ಪ್ರಸ್ತಾವನೆ:**

ಬೆಂಗಳೂರು ಮಹಾನಗರ ಪಾಲಿಕೆಯು ನೈಟಿಂಗೇಲ್ಸ್ ಮೆಡಿಕಲ್ ಟ್ರಸ್ಟ್ ರವರ ಸಹಭಾಗಿತ್ವದೊಂದಿಗೆ ಅಕ್ಕಿತಿಮ್ಮನಹಳ್ಳಿ, ಶಾಂತಿನಗರ, ಓ ಷಾಂಗಸ್ಸಿ ರಸ್ತೆ, ದಿವ್ಯಶ್ರೀ ಕಾಂಪ್ಲೆಕ್ಸ್ ಪಕ್ಕ ಇರುವ ನಗರ ಪಾಲಿಕೆಯ ಶಿಶುವಿಹಾರ ಕೇಂದ್ರದ ಕಟ್ಟಡದಲ್ಲಿ ಹಗಲು ನಿರೀಕ್ಷಣಾ ಕೇಂದ್ರವನ್ನು ನಡೆಸಲಾಗುತ್ತಿದೆ.

ಸದರಿ ಕೇಂದ್ರವನ್ನು ಪ್ರಾರಂಭಿಸಲು ದಿನಾಂಕ:24/03/2003 ರಂದು ನೈಟಿಂಗೇಲ್ಸ್ ಮೆಡಿಕಲ್ ಟ್ರಸ್ಟ್‌ರವರು ಪ್ರಸ್ತಾವನೆಯನ್ನು ಸಲ್ಲಿಸಿದ್ದು, ಇವರ ಪ್ರಸ್ತಾವನೆಯ ಮೇರೆಗೆ ಶಿಕ್ಷಣ ಮತ್ತು ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿಯ ಮುಂದೆ ಟಿಪ್ಪಣಿಯನ್ನು ಮಂಡಿಸಲಾಗಿರುತ್ತದೆ. ದಿನಾಂಕ:07/10/2003 ರಂದು ವಿಷಯದ ಸಂಖ್ಯೆ:24/03–04 ರಲ್ಲಿ ಶಿಕ್ಷಣ ಮತ್ತು ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿಯಲ್ಲಿ ಆಯುಕ್ತರ ಟಿಪ್ಪಣಿಯಲ್ಲಿ ತಿಳಿಸಿರುವ ಪ್ರಾಜೆಕ್ಟ್ ವರದಿಯನ್ನು ಅನುಮೋದಿಸುತ್ತಾ, ಸದರಿ ಸಂಸ್ಥೆಗೆ ಪ್ರಾಯೋಗಿಕವಾಗಿ ಒಂದು ವರ್ಷದ ಅವಧಿಗೆ " ಹಗಲು ನಿರೀಕ್ಷಣಾ ಕೇಂದ್ರ " ನಡೆಸಲು ಅನುಮತಿಯನ್ನು ನೀಡಲು ತೀರ್ಮಾನಿಸಲಾಗಿರುತ್ತದೆ. ಈ ಯೋಜನೆಯನ್ನು 08–09 (ಮಾರ್ಚ್ 2008–ರಿಂದ ಫೆಬ್ರವರಿ 2009) ರ ವರೆವಿಗೂ ಮುಂದುವರೆಸಲು ಮಾನ್ಯ ಆಡಳಿತಗಾರರು ದಿನಾಂಕ:05/02/2008 ರಂದು ವಿಷಯದ ಸಂಖ್ಯೆ:375/07–08 ರಲ್ಲಿ ಅನುಮೋದನೆ ನೀಡಿರುತ್ತಾರೆ.

ದಿನಾಂಕ:30/12/2003 ರಂದು ನೈಟಿಂಗೇಲ್ಸ್ ಮೆಡಿಕಲ್ ಟ್ರಸ್ಟ್‌ರವರೊಂದಿಗೆ ಆಯುಕ್ತರವರು ಅಕ್ಕಿತಿಮ್ಮನಹಳ್ಳಿ, ಶಾಂತಿನಗರ, ಓ ಷಾಂಗಸ್ಸಿ ರಸ್ತೆ, ದಿವ್ಯಶ್ರೀ ಕಾಂಪ್ಲೆಕ್ಸ್ ಪಕ್ಕ ಇರುವ ನಗರ ಪಾಲಿಕೆಯ ಶಿಶುವಿಹಾರ ಇಲ್ಲಿ ಹಗಲು ನಿರೀಕ್ಷಣಾ ಕೇಂದ್ರವನ್ನು ಪ್ರಾರಂಭಿಸಲು ಒಡಂಬಡಿಕೆಯನ್ನು ಮಾಡಿಕೊಳ್ಳಲಾಗಿರುತ್ತದೆ. ಸದರಿ ಒಡಂಬಡಿಕೆಯ ಕ್ರಮ ಸಂಖ್ಯೆ 06 ರಲ್ಲಿ ಒಪ್ಪಿರುವಂತೆ ಈ ಕೇಂದ್ರವನ್ನು ಪ್ರಾರಂಭಿಕವಾಗಿ 5 ವರ್ಷದವರೆವಿಗೂ ನಡೆಸಲು ಹಾಗೂ 5 ವರ್ಷದ ನಂತರ ಮುಂದುವರೆಸಬೇಕಾದಲ್ಲಿ ಹೊಸ ನಿಬಂಧನೆಗಳು ಮತ್ತು ಷರತ್ತುಗಳನ್ನು ವಿಧಿಸಿ ಪರಸ್ಪರ ಒಪ್ಪಿಗೆಯ ಮೇರೆಗೆ ಮುಂದುವರೆಸಬಹುದಾಗಿದೆಯೆಂದು ಒಡಂಬಡಿಕೆ ಮಾಡಿಕೊಳ್ಳಲಾಗಿರುತ್ತದೆ. ಒಡಂಬಡಿಕೆಯಂತೆ 2004–05ನೇ ಸಾಲಿನಿಂದ 2008–09ನೇ ಸಾಲಿಗೆ ಒಡಂಬಡಿಕೆಯು ಅಂತ್ಯಗೊಳ್ಳುತ್ತದೆ. ಸದರಿ ಯೋಜನೆಯನ್ನು ಫೆಬ್ರವರಿ 2009 ರ ನಂತರ ಮುಂದುವರೆಸಲು, ಡಾ॥ ರಾಧ ಎಸ್. ಮೂರ್ತಿ, ಮ್ಯಾನೇಜಿಂಗ್ ಟ್ರಸ್ಟಿ, ನೈಟಿಂಗೇಲ್ಸ್ ಮೆಡಿಕಲ್ ಟ್ರಸ್ಟ್‌ರವರು ಮನವಿ ಸಲ್ಲಿಸಿ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಹಭಾಗಿತ್ವದಲ್ಲಿ ಅಕ್ಕಿತಿಮ್ಮನಹಳ್ಳಿ, ಶಾಂತಿನಗರ, ವಾರ್ಡ್‌ನಲ್ಲಿ ಹಿರಿಯ ನಾಗರೀಕರಿಗೆ "ಸಂಧ್ಯಾಕಿರಣ" ಹಗಲು ನಿರೀಕ್ಷಣಾ ಕೇಂದ್ರವನ್ನು ನಡೆಸಲಾಗುತ್ತಿದ್ದು, ಸದರಿ ಕೇಂದ್ರದಲ್ಲಿ ಸವಲತ್ತು ಪಡೆಯುತ್ತಿರುವ ಹಿರಿಯ ನಾಗರೀಕರಿಂದ ಶುಲ್ಕ ಪಡೆಯಲು ಸಾಧ್ಯವಾಗದ ಕಾರಣ, ಫೆಬ್ರವರಿ 2009ರ ನಂತರ ಕೇಂದ್ರವನ್ನು ಮುಂದುವರೆಸಿಕೊಂಡು ಹೋಗಲು ಕೇಂದ್ರ ಸರ್ಕಾರದಿಂದ ಆರ್ಥಿಕ ಸಹಾಯ ಪಡೆಯಲು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವತಿಯಿಂದ ನಿರಾಕ್ಷೇಪಣಾ ಪತ್ರ ನೀಡಲು ಕೋರಿರುತ್ತಾರೆ. ಇವರ ಮನವಿಯನ್ನು ಪರಿಶೀಲಿಸಿ, ವಿಶೇಷ ಆಯುಕ್ತರು (ಆಡಳಿತ) ರವರು ನಿರಾಕ್ಷೇಪಣಾ ಪತ್ರವನ್ನು ನೀಡಬಹುದೆಂದು ಹಾಗೂ ಈ ಯೋಜನೆಯಲ್ಲಿ ಕೇಂದ್ರ ಸರ್ಕಾರದ ಸಂಬಂಧಪಟ್ಟ ಇಲಾಖೆಯ ಸಹಭಾಗಿ ಅದ ಪಕ್ಷದಲ್ಲಿ ಯೋಜನೆಯನ್ನು ಮುಂದಿನ 5 ವರ್ಷದ ಅವಧಿಯವರೆಗೆ ಮುಂದುವರೆಸಲು ಕ್ರಮತೆಗೆದುಕೊಳ್ಳಲು ಸೂಚಿಸಿರುತ್ತಾರೆ.

ನೈಟಿಂಗೇಲ್ಸ್ ಮೆಡಿಕಲ್ ಟ್ರಸ್ಟ್ ರವರು, ಕೇಂದ್ರ ಸರ್ಕಾರದ ಸಂಬಂಧಪಟ್ಟ ಇಲಾಖೆಯಿಂದ ಅನುದಾನವನ್ನು ಮಂಜೂರು ಮಾಡಿರುವುದಕ್ಕೆ ಒಪ್ಪಿಗೆ ಪತ್ರವನ್ನು ಪಡೆದು ಪಾಲಿಕೆಗೆ ಸಲ್ಲಿಸಿದಲ್ಲಿ, ನಿವೇದನಾ ಒಪ್ಪಂದದ ಅವಧಿಯು ಮುಗಿದ ನಂತರ ಕೇಂದ್ರ ಸರ್ಕಾರದ ಸಂಬಂಧಪಟ್ಟ ಇಲಾಖೆ, ನೈಟಿಂಗೇಲ್ಸ್ ಮೆಡಿಕಲ್ ಟ್ರಸ್ಟ್ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಒಳಗೊಂಡಂತೆ ಒಡಂಬಡಿಕೆ ಮಾಡಿಕೊಂಡು, ಪಾಲಿಕೆ ವತಿಯಿಂದ ಉಚಿತ ಕಟ್ಟಡದೊಂದಿಗೆ, ಹಿರಿಯ ನಾಗರಿಕರಿಗೆ ಮಧ್ಯಾಹ್ನದ ಬಿಸಿ ಊಟವನ್ನು ನೀಡಬಹುದಾಗಿದೆ ಎಂಬ ಷರತ್ತಿಗೆ ಒಳಪಟ್ಟು ನಿರಾಕ್ಷೇಪಣಾ ಪತ್ರವನ್ನು ನೀಡಲಾಗಿದೆ.

ಈ ಹಿನ್ನೆಲೆಯಲ್ಲಿ ಕೇಂದ್ರ ಸರ್ಕಾರದ ಸಂಬಂದಪಟ್ಟ ಇಲಾಖೆಯು, ಅನುದಾನವನ್ನು ಮಂಜೂರು ಮಾಡಿದ ಪಕ್ಷದಲ್ಲಿ, ಮೇಲ್ಕಂಡ ಷರತ್ತುಗಳಿಗೆ ಒಳಪಟ್ಟು, "ಸಂಧ್ಯಾಕಿರಣ" ಹಗಲು ನಿರೀಕ್ಷಣಾ ಕೇಂದ್ರವನ್ನು ಬೆಂಗಳೂರು ಮಹಾನಗರ ಪಾಲಿಕೆ ಹಾಗೂ ನೈಟಿಂಗೇಲ್ಸ್ ಮೆಡಿಕಲ್ ಟ್ರಸ್ಟ್ ರವರ ಸಹಭಾಗಿತ್ವದೊಂದಿಗೆ ನಡೆಸಲು ಮಾಡಿಕೊಂಡಿರುವ ಒಡಂಬಡಿಕೆ ಅವಧಿಯು ಫೆಬ್ರವರಿ–2009 ಅಂತ್ಯಕ್ಕೆ ಮುಗಿದ ನಂತರ ಪ್ರಸಕ್ತ ಚಾಲ್ತಿಯಲ್ಲಿರುವ ಒಡಂಬಡಿಕೆ ಷರತ್ತುಗಳನ್ನು ಮಾರ್ಪಡಿಸಿ ಹೊಸ ಮಾರ್ಗ ಸೂಚಿಗಳೊಂದಿಗೆ ಯೋಜನೆಯನ್ನು ಮುಂದಿನ 5 ವರ್ಷ ಅವಧಿಗೆ ಮುಂದುವರೆಸಲು ಅನುಮೋದನೆ ಕೋರಿ ಮಾನ್ಯ ಆಡಳಿತಗಾರರ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:15/07/2008 ರ ಟಿಪ್ಪಣಿ.

**ತೀರ್ಮಾನ:** ಆಯುಕ್ತರವರ ದಿನಾಂಕ:15/07/2008 ರ ಟಿಪ್ಪಣಿಯನ್ನು ಒಪ್ಪಿದೆ.

(ದಿಲೀಪ್ ರಾವ್)
ಆಡಳಿತಗಾರರು

ನೈಟಿಂಗೇಲ್ಸ್ ಮೆಡಿಕಲ್ ಟ್ರಸ್ಟ್ ರವರು, ಕೇಂದ್ರ ಸರ್ಕಾರದ ಸಂಬಂಧಪಟ್ಟ ಇಲಾಖೆಯಿಂದ ಅನುದಾನವನ್ನು ಮಂಜೂರು ಮಾಡಿರುವುದಕ್ಕೆ ಒಪ್ಪಿಗೆ ಪತ್ರವನ್ನು ಪಡೆದು ಪಾಲಿಕೆಗೆ ಸಲ್ಲಿಸಿದಲ್ಲಿ, ನಿವೇದನಾ ಒಪ್ಪಂದದ ಅವಧಿಯು ಮುಗಿದ ನಂತರ ಕೇಂದ್ರ ಸರ್ಕಾರದ ಸಂಬಂಧಪಟ್ಟ ಇಲಾಖೆ, ನೈಟಿಂಗೇಲ್ಸ್ ಮೆಡಿಕಲ್ ಟ್ರಸ್ಟ್ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಒಳಗೊಂಡಂತೆ ಒಡಂಬಡಿಕೆ ಮಾಡಿಕೊಂಡು, ಪಾಲಿಕೆ ವತಿಯಿಂದ ಉಚಿತ ಕಟ್ಟಡದೊಂದಿಗೆ, ಹಿರಿಯ ನಾಗರಿಕರಿಗೆ ಮಧ್ಯಾಹ್ನದ ಬಿಸಿ ಊಟವನ್ನು ನೀಡಬಹುದಾಗಿದೆ ಎಂಬ ಷರತ್ತಿಗೆ ಒಳಪಟ್ಟು ನಿರಾಕ್ಷೇಪಣಾ ಪತ್ರವನ್ನು ನೀಡಲಾಗಿದೆ.

ಈ ಹಿನ್ನೆಲೆಯಲ್ಲಿ ಕೇಂದ್ರ ಸರ್ಕಾರದ ಸಂಬಂದಪಟ್ಟ ಇಲಾಖೆಯು, ಅನುದಾನವನ್ನು ಮಂಜೂರು ಮಾಡಿದ ಪಕ್ಷದಲ್ಲಿ, ಮೇಲ್ಕಂಡ ಷರತ್ತುಗಳಿಗೆ ಒಳಪಟ್ಟು, “ಸಂಧ್ಯಾಕಿರಣ” ಹಗಲು ನಿರೀಕ್ಷಣಾ ಕೇಂದ್ರವನ್ನು ಬೆಂಗಳೂರು ಮಹಾನಗರ ಪಾಲಿಕೆ ಹಾಗೂ ನೈಟಿಂಗೇಲ್ಸ್ ಮೆಡಿಕಲ್ ಟ್ರಸ್ಟ್ ರವರ ಸಹಭಾಗಿತ್ವದೊಂದಿಗೆ ನಡೆಸಲು ಮಾಡಿಕೊಂಡಿರುವ ಒಡಂಬಡಿಕೆ ಅವಧಿಯು ಫೆಬ್ರವರಿ–2009 ಅಂತ್ಯಕ್ಕೆ ಮುಗಿದ ನಂತರ ಪ್ರಸಕ್ತ ಚಾಲ್ತಿಯಲ್ಲಿರುವ ಒಡಂಬಡಿಕೆ ಷರತ್ತುಗಳನ್ನು ಮಾರ್ಪಡಿಸಿ ಹೊಸ ಮಾರ್ಗ ಸೂಚಿಗಳೊಂದಿಗೆ ಯೋಜನೆಯನ್ನು ಮುಂದಿನ 5 ವರ್ಷ ಅವಧಿಗೆ ಮುಂದುವರೆಸಲು ಅನುಮೋದನೆ ಕೋರಿ ಮಾನ್ಯ ಆಡಳಿತಗಾರರ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:15/07/2008 ರ ಟಿಪ್ಪಣಿ.

**ತೀರ್ಮಾನ:** ಆಯುಕ್ತರವರ ದಿನಾಂಕ:15/07/2008 ರ ಟಿಪ್ಪಣಿಯನ್ನು ಒಪ್ಪಿದೆ.

(ದಿಲೀಪ್ ರಾವ್)
ಆಡಳಿತಗಾರರು

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಅಧಿಕಾರಗಳನ್ನು ಚಲಾಯಿಸಿ ಆಡಳಿತಗಾರರ ದಿನಾಂಕ:22/07/2008 ರ ನಡವಳಿಗಳು

**ವಿಷಯದ ಸಂಖ್ಯೆ:351/08–09**

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಹಳೆಯ ಮೂರು ವಲಯ ಮತ್ತು ರಾಜರಾಜೇಶ್ವರಿನಗರ ವಲಯದಲ್ಲಿ ಬೀದಿ ನಾಯಿ ನಿಯಂತ್ರಣ ಕಾರ್ಯಕ್ರಮದ ಬಗ್ಗೆ.

**ಪ್ರಸ್ತಾವನೆ:**

1. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಹಳೆಯ ಮೂರು ವಲಯಗಳಲ್ಲಿ ಬೀದಿ ನಾಯಿ ನಿಯಂತ್ರಣ ಯೋಜನೆಯನ್ನು ನಾಲ್ಕು ಸರ್ಕಾರೇತರ ಸಂಸ್ಥೆಗಳು ಮತ್ತು ರಾಜ್ಯ ಸರ್ಕಾರದ ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆಯೊಂದಿಗೆ ಈ ಕಾರ್ಯಕ್ರಮವನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ 100 ವಾರ್ಡ್‌ಗಳಲ್ಲಿ ನಿರ್ವಹಿಸಲಾಗುತ್ತಿದೆ ಮತ್ತು ಹೊಸ ವಲಯಗಳಲ್ಲಿ ಸೆಪ್ಟೆಂಬರ್ 2007 ರಿಂದ ಕಾರ್ಯಕ್ರಮ ನಿರ್ವಹಿಸಲಾಗುತ್ತಿದೆ. ಈ ಸಂಸ್ಥೆಗಳು ಮತ್ತು ಪಶುಪಾಲನಾ ಇಲಾಖೆಯು ಬೀದಿ ನಾಯಿಗಳನ್ನು ಹಿಡಿದು ಸಂತಾನ ಹರಣ ಶಸ್ತ್ರ ಚಿಕಿತ್ಸೆಗೊಳಪಡಿಸಿ ಅವುಗಳಿಗೆ ಎ.ಆರ್.ವಿ. ಲಸಿಕೆ ನೀಡಲಾಗುತ್ತಿದೆ. ಯಾವುದೇ ನಾಯಿ ವಾಸಿಯಾಗದ ಕಾಯಿಲೆಯಿಂದ ಬಳಲುತ್ತಿದ್ದು/ಕ್ರೂರವಾಗಿ ವರ್ತಿಸುತ್ತಿದ್ದ ಅಥವಾ ರೇಬೀಸ್ ರೋಗದಿಂದ ಪೀಡಿತಗಳಾಗಿರುವ ಇವುಗಳನ್ನು ದಯಾ ಮರಣಕ್ಕೆ ಒಳಪಡಿಸುವುದು. ಈ ಕಾರ್ಯಕ್ರಮದ ಅನುಷ್ಠಾನಕ್ಕೆ ಹಳೆಯ ವಲಯಗಳಲ್ಲಿ ದಿನಾಂಕ:30/06/2008 ರವರೆಗೆ ಅನುಮೋದನೆ ಇರುತ್ತದೆ. ಈ ಕಾರ್ಯಕ್ರಮವನ್ನು ಒಂದು ವರ್ಷದವರೆಗೆ ವಿಸ್ತರಿಸುವ ಪ್ರಸ್ತಾವನೆಗೆ ದಿನಾಂಕ:14/02/2008 ರಂದು ವಿಶೇಷ ಆಯುಕ್ತರು ಅನುಮೋದನೆಯ ಪ್ರಕಾರ ಅಧಿಸೂಚನೆ ಹೊರಡಿಸಿ, ಹಳೆಯ 3 ವಲಯಗಳಲ್ಲಿ ಎ.ಬಿ.ಸಿ ಕಾರ್ಯಕ್ರಮವನ್ನು ಸಿ.ಎನ್.ವಿ.ಆರ್.ಪದ್ದತಿಯಲ್ಲಿ ಕೈಗೊಳ್ಳಲು ಆಸಕ್ತಿ ವ್ಯಕ್ತಪಡಿಸುವ ಜಾಹೀರಾತನ್ನು ದಿನಾಂಕ:13/05/2008 ರಂದು ಪತ್ರಿಕೆಯಲ್ಲಿ ಪ್ರಕಟಿಸಿದ್ದು ಅವಧಿಯನ್ನು 28/05/2008 ರವರೆಗೆ ನಿಗಧಿಪಡಿಸಲಾಗಿತ್ತು. ಈ ಪ್ರಕಟಣೆಗೆ ಪ್ರತಿಕ್ರಿಯಿಸಿದ ಸರ್ಕಾರೇತರ ಸಂಸ್ಥೆಗಳಿಂದ ಬಂದ ಪ್ರಸ್ತಾವನೆಗಳನ್ನು ದಿನಾಂಕ:16/06/2008 ರ ಬೆಳಗ್ಗೆ 10.00 ಘಂಟೆಗೆ ತೆರೆಯಲಾಯಿತು.

2. ಈ ಕೆಳಕಂಡ ಸಂಸ್ಥೆಗಳು ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.
   1. ಮೆ:ಕರುಣಾ ಅನಿಮಲ್ ವೆಲ್‌ಫೇರ್ ಅಸೋಸಿಯೇಷನ್ ಆಫ್ ಕರ್ನಾಟಕ, ಇವರು ಬೆಂಗಳೂರು ಪಶ್ಚಿಮ ವಲಯದಲ್ಲಿ ಪ್ಯಾಕೇಜ್ 1 ಮತ್ತು 2 ರಲ್ಲಿ ಕಾರ್ಯನಿರ್ವಹಿಸಲು ಆಸಕ್ತಿ ವ್ಯಕ್ತಪಡಿಸಿರುತ್ತಾರೆ.
   2. ಮೆ:ಅನಿಮಲ್ ರೈಟ್ಸ್ ಫಂಡ್, ಇವರು ಬೆಂಗಳೂರು ದಕ್ಷಿಣ ವಲಯದ ಪ್ಯಾಕೇಜ್ ಸಂಖ್ಯೆ:5, 6 ಮತ್ತು 7 ಹಾಗೂ ಪಶ್ಚಿಮ ವಲಯದ ಪ್ಯಾಕೇಜ್ ಸಂಖ್ಯೆ:3, 4 ರಲ್ಲಿ ಕಾರ್ಯ ನಿರ್ವಹಸಿಸಲು ಆಸಕ್ತಿ ವ್ಯಕ್ತಪಡಿಸಿರುತ್ತಾರೆ.
   3. ಮೆ:ಕಂಪ್ಯಾಶನ್ ಅನ್ ಲಿಮಿಟೆಡ್ ಪ್ಲಸ್ ಆಕ್ಷನ್, ಇವರು ಪೂರ್ವ ವಲಯದ ಪ್ಯಾಕೇಜ್ ಸಂಖ್ಯೆ:8, 9, 10 ರಲ್ಲಿ ಕಾರ್ಯ ನಿರ್ವಹಿಸಲು ಆಸಕ್ತಿ ವ್ಯಕ್ತಪಡಿಸಿರುತ್ತಾರೆ.

3. ಒಟ್ಟು 3 ಎನ್.ಜಿ.ಓ.ಗಳಿಂದ 10 ಪ್ರಸ್ತಾವನೆಗಳು ಬಂದಿದ್ದು, ಈ ಪ್ರಸ್ತಾವನೆಗಳನ್ನು ಪರಿಶೀಲಿಸಲಾಗಿ ಈ 3 ಸಂಸ್ಥೆಗಳು 10 ಪ್ಯಾಕೇಜ್‌ಗಳಿಗೆ ನಮೂದಿಸಿರುವ ದರಗಳು ಈ ಕೆಳಕಂಡಂತಿರುತ್ತವೆ.

. . . 2

| ಸಂಸ್ಥೆಯ ಹೆಸರು | ಪ್ಯಾಕೇಜ್ ಸಂಖ್ಯೆ | ಸಂತಾನ ಹರಣ ಶಸ್ತ್ರ ಚಿಕಿತ್ಸೆ ಮತ್ತು ಎ.ಆರ್.ವಿ. ಲಸಿಕೆಯೊಂದಿಗೆ | | ಪುನರಾವರ್ತಿತ ಎ.ಆರ್.ವಿ. | ದಯಾ ಮರಣಕ್ಕೆ ಒಳಪಡಿಸಲು |
|---|---|---|---|---|---|
| | | ಗಂಡು ನಾಯಿ | ಹೆಣ್ಣು ನಾಯಿ | | |
| ಕರುಣಾ | 1 ಮತ್ತು 2 | 515 | 540 | 80 | 70 |
| ಎ.ಆರ್.ಎಫ್. | 3, 4, 5, 6, 7 | 600 | 600 | 100 | 80 |
| ಕ್ಯೂಪಾ | 8, 9, 10 | 520 | 550 | 80 | 70 |

ಜಂಟಿ ಆಯುಕ್ತರು (ಆರೋಗ್ಯ), ಇವರು ಈ ಪ್ರಸ್ತಾವನೆ ದರಗಳನ್ನು ಪರಿಶೀಲಿಸಿ ಕರುಣಾ ಸಂಸ್ಥೆಯವರು ನಮೂದಿಸಿರುವ ದರಗಳು ಕನಿಷ್ಠವಾಗಿದ್ದು, ಈ ದರದಲ್ಲಿ ಉಳಿದ ಸರ್ಕಾರೇತರ ಸಂಸ್ಥೆಗಳು ಕಾರ್ಯ ನಿರ್ವಹಿಸಲು ಒಪ್ಪಿಗೆ ಇದ್ದರೆ, ಒಪ್ಪಿಗೆ ಪತ್ರವನ್ನು ದಿನಾಂಕ:17.06/2008 ರ ಸಂಜೆ 5.00 ಘಂಟೆಯ ಒಳಗೆ ಒಪ್ಪಿಗೆ ಪತ್ರ ನೀಡಲು ಸೂಚಿಸಿರುತ್ತಾರೆ.

ದಿನಾಂಕ:17/06/2008 ರ ಸಂಜೆ 5.00 ಘಂಟೆಗೆ ಜಂಟಿ ಆಯುಕ್ತರು (ಆರೋಗ್ಯ), ಇವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ 3 ಸಂಸ್ಥೆಗಳಾದ ಎ.ಆರ್.ಎಫ್., ಕರುಣಾ, ಕ್ಯೂಪಾ ಇವರು ಜಂಟಿ ಆಯುಕ್ತರು ನಿಗಧಿಪಡಿಸಿದ ದರಗಳಲ್ಲಿ ಆಸಕ್ತಿ ವ್ಯಕ್ತಪಡಿಸಿರುವ ಪ್ಯಾಕೇಜ್‌ಗಳಲ್ಲಿ ಕಾರ್ಯ ನಿರ್ವಹಿಸಲು ಒಪ್ಪಿಗೆ ಪತ್ರವನ್ನು ನೀಡಿದ್ದಾರೆ.

ರಾಜರಾಜೇಶ್ವರಿನಗರ ವಲಯದಲ್ಲಿ ಎ.ಬಿ.ಸಿ.ಕಾರ್ಯಕ್ರಮವನ್ನು ಸಿ.ಎನ್.ವಿ.ಆರ್. ಪದ್ಧತಿಯಲ್ಲಿ ನಡೆಸಲು ಆಸಕ್ತಿ ವ್ಯಕ್ತಪಡಿಸುವಿಕೆಯ ಪ್ರಸ್ತಾವನೆ ಪ್ರಕ್ರಿಯೆಯ ಅಧಿಸೂಚನೆಯನ್ನು ಹೊರಡಿಸಲಾಗಿದ್ದು, ಈ ಅಧಿಸೂಚನೆಯಲ್ಲಿ ದಿನಾಂಕ:22/04/2008 ರಿಂದ 29/05/2008 ರವರೆಗೆ ಕಾಲಾವಕಾಶ ನೀಡಿ ಮತ್ತೆ ತಿದ್ದುಪಡಿ ಅಧಿಸೂಚನೆಯ ಮೂಲಕ ಕಾಲಾವಕಾಶವನ್ನು 20/06/2008 ರವರೆವಿಗೆ ವಿಸ್ತರಿಸಿದ್ದರೂ ಒಂದು ಸಂಸ್ಥೆಯವರು ಮಾತ್ರ ಅರ್ಜಿ ಸಲ್ಲಿಸಿರುತ್ತಾರೆ. ಇಷ್ಟು ದೀರ್ಘಕಾಲ ಕಾಲಾವಕಾಶ ನೀಡಿದ್ದರೂ, 2007–08ನೇ ಸಾಲಿನಲ್ಲಿ ಹೊರಡಿಸಲಾದ ಅಧಿಸೂಚನೆಯಲ್ಲಿ ಯಾರೂ ಆಸಕ್ತಿ ವ್ಯಕ್ತಪಡಿಸಿಲ್ಲದ ಕಾರಣ ವಿಶೇಷ ಆಯುಕ್ತರು (ಆಡಳಿತ) ರವರ ಅನುಮೋದನೆ ಮೇರೆಗೆ 23/06/2008 ರ ಸಂಜೆ 5.00 ಘಂಟೆಗೆ ಜಂಟಿ ಆಯುಕ್ತರು (ಆರೋಗ್ಯ), ಇವರ ಸಮ್ಮುಖದಲ್ಲಿ ಪ್ರಸ್ತಾವನೆ ಅರ್ಜಿಯನ್ನು ತೆರೆಯಲಾಗಿ ಎ.ಆರ್.ಎಫ್. ಸಂಸ್ಥೆಯವರು ಮಾತ್ರ ರಾಜರಾಜೇಶ್ವರಿನಗರ ವಲಯದಲ್ಲಿ ಸಿ.ಎನ್.ವಿ.ಆರ್. ಪದ್ಧತಿಯ ಮೂಲಕ ಸಂತಾನ ಹರಣ ಶಸ್ತ್ರ ಚಿಕಿತ್ಸೆ ಕಾರ್ಯಕ್ರಮವನ್ನು ನಡೆಸಲು ಪ್ರಸ್ತಾವನೆ ಸಲ್ಲಿಸಿರುತ್ತಾರೆ.

7 ಈ ಪ್ರಸ್ತಾವನೆಯಲ್ಲಿ ಶಸ್ತ್ರಚಿಕಿತ್ಸೆಗೆ ಗಂಡು/ಹೆಣ್ಣು ನಾಯಿಗೆ ರೂ.600/– ನ್ನು ಎ.ಆರ್.ವಿ. ಲಸಿಕೆಗೆ ರೂ.100/– ನ್ನು ಮತ್ತು ದಯಾ ಮರಣಕ್ಕೆ 80 ರೂ.ಗಳನ್ನು ನಮೂದಿಸಿರುತ್ತಾರೆ. ಈ ದರಗಳನ್ನು ಪರಿಶೀಲಿಸದ ಜಂಟಿ ಆಯುಕ್ತರು (ಆರೋಗ್ಯ), ಇವರು ಎ.ಅರ್.ಎಫ್. ಸಂಸ್ಥೆಯವರಿಗೆ ರಾಜರಾಜೇಶ್ವರಿನಗರ ವಲಯದಲ್ಲಿ ಈಗಾಗಲೇ ದಿನಾಂಕ:17/06/2008 ರಂದು ಹಳೆಯ ವಲಯಗಳಿಗೆ ನಿಗಧಿಪಡಿಸಿದ ದರಗಳಲ್ಲಿಯೇ ಕಾರ್ಯ ನಿರ್ವಹಿಸಲು ಸೂಚಿಸಿ ಆಸಕ್ತಿ ಇದ್ದರೆ ಒಪ್ಪಿಗೆ ಪತ್ರವನ್ನು ನೀಡಲು ತಿಳಿಸಿರುವ ಮೇರೆಗೆ ಎ.ಆರ್.ಎಫ್. ಸಂಸ್ಥೆಯವರು ಒಪ್ಪಿಗೆ ಪತ್ರವನ್ನು ನೀಡಿರುತ್ತಾರೆ.

. . . 3

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ



8. ಈ ಕಾರ್ಯಕ್ರಮಕ್ಕೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಎಲ್ಲಾ 8 ವಲಯಗಳಿಗೂ ಸೇರಿದಂತೆ 2008-09ನೇ ಸಾಲಿನಲ್ಲಿ 445 ಲಕ್ಷ ರೂ.ಗಳ ಅನುದಾನವನ್ನು ನಿಗಧಿಪಡಿಸಿದ್ದು, ಈ ಮೊತ್ತವನ್ನು "ಲೆಕ್ಕ ಶೀರ್ಷಿಕೆ, 15 ಸಾಮಾನ್ಯ ಆರೋಗ್ಯ ಬೀದಿ ನಾಯಿಗಳ ನಿರ್ವಹಣೆ" ಯಲ್ಲಿ ಭರಿಸಲಾಗುವುದು. ಮೇಲೆ ವಿವರಿಸಿದಂತೆ, ಮೇಲೆ ಕಾಣಿಸಿದ ಸರ್ಕಾರೇತರ ಸಂಸ್ಥೆಗಳಿಗೆ ಬೆಂಗಳೂರು ಮಹಾನಗರ ಪಾಲಿಕೆಯ ಹಳೆಯ 3 ವಲಯ ಹಾಗೂ ರಾಜರಾಜೇಶ್ವರಿನಗರ ವಲಯದಲ್ಲಿ ಬೀದಿ ನಾಯಿಗಳಿಗೆ ಸಂತಾನಹರಣ ಶಸ್ತ್ರ ಚಿಕಿತ್ಸೆ ಕಾರ್ಯಕ್ರಮವನ್ನು ಮುಂದುವರೆಸಲು ಅನುಮೋದನೆ ಕೋರಿ ಮಾನ್ಯ ಆಡಳಿತಗಾರರ ಮುಂದೆ ಮಂಡಿಸಿರುವ ಅಯುಕ್ತರವರ ದಿನಾಂಕ:16/07/2008 ರ ಟಿಪ್ಪಣಿ.

**ತೀರ್ಮಾನ:** ಅಯುಕ್ತರವರ ದಿನಾಂಕ:16/07/2008 ರ ಟಿಪ್ಪಣಿಯನ್ನು ಒಪ್ಪಿದೆ.

(ದಿಲೀಪ್ ರಾವ್)
ಆಡಳಿತಗಾರರು

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಅಧಿಕಾರಗಳನ್ನು ಚಲಾಯಿಸಿ ಆಡಳಿತಗಾರರ ದಿನಾಂಕ:22/07/2008 ರ ನಡವಳಿಗಳು

ವಿಷಯದ ಸಂಖ್ಯೆ:352/2008-09

ವಾರ್ಡ್:55ಕುಮಾರಸ್ವಾಮಿ ಲೇಔಟ್ -1ನೇ ಹಂತ -14ನೇ ಮುಖ್ಯ ರಸ್ತೆಯಲ್ಲಿರುವ ನಿವೇಶನ ಸಂಖ್ಯೆ:-37 ಖಾತೆದಾರರಾದ ಶ್ರೀ.ಸಿ.ಜಿ.ಶ್ರೀನಿವಾಸ ಬಿನ್ ಸಿ.ಜಿ. ಶಾಸ್ತ್ರೀಯವರು 492.45,ಚದರ ಅಡಿ ಜಾಗವನ್ನು ರಸ್ತೆ ಅಗಲೀಕರಣಕ್ಕೆ ಭೂಸ್ವಾಧೀನ ಪಡಿಸಿಕೊಳ್ಳುವ ವಿಚಾರದ ಬಗ್ಗೆ.

ಪ್ರಸ್ತಾವನೆ:

ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಬರುವ-55ನೇ ವಾರ್ಡ್ ಕುಮಾರಸ್ವಾಮಿ ಬಡಾವಣೆಯ ಒಂದನೇ ಹಂತ 14ನೇ ಮುಖ್ಯ ರಸ್ತೆಯಲ್ಲಿರುವ ನಿವೇಶನ ಸಂಖ್ಯೆ:36ರ 6.10ಚಮೀ.X9.15ಚ.ಮೀ. ಮತ್ತು ನಿವೇಶನ ಸಂಖ್ಯೆ:37ರ 6.10ಚಮೀ.X9.15ಚ.ಮೀ ನ್ನು ಶ್ರೀ. ಸಿ.ಜಿ.ಶ್ರೀನಿವಾಸ ಬಿನ್ ಸಿ.ಜಿ.ಶಾಸ್ತ್ರೀಯವರು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ಬಹಿರಂಗ ಹರಾಜಿನಲ್ಲಿ ಪಡೆದಿರುತ್ತಾರೆ. ಈ ನಿವೇಶನಗಳ ನೊಂದಣಿ ಸಂಖ್ಯೆ:6177-ದಿನಾಂಕ-02-09-2005, ಮತ್ತು 1883 ದಿನಾಂಕ:03-07-2006ರಂದು ನೊಂದಣಿ ಆಗಿರುತ್ತದೆ. ಮುನಿಸಿಪಲ್ ಖಾತೆ ನಂ:36/37ಅಗಿರುತ್ತದೆ.

ನಿವೇಶನದ ಖಾತೆದಾರರು ಈ ನಿವೇಶನಗಳಲ್ಲಿ ವಾಣಿಜ್ಯ ಕಟ್ಟಡ ಕಟ್ಟಲು ಪರವಾನಿಗೆ ನೀಡುವಂತೆ ಕೋರಿ ಅರ್ಜಿಸಲ್ಲಿಸಿದ ಮೇರೆಗೆ ಈ ನಿವೇಶನದ ಸುಮಾರು 5 ಮೀ. ರಸ್ತೆ ಅಗಲೀಕರಣಕ್ಕೆ ಅವಶ್ಯಕವಿರುವುದರಿಂದ, ಪರಿಷ್ಕೃತ ನಕ್ಷೆ ಸಲ್ಲಿಸುವಂತೆ ಖಾತೇದಾರರಿಗೆ, ದಿನಾಂಕ:06-06-2007ರಂದು, ತಿಳುವಳಿಕೆ ನೀಡಲಾಗಿತ್ತು.

ಅದರೆ ಖಾತೇದಾರರು, ಈ ತಿಳುವಳಿಕೆ ವಿರುದ್ಧ ಕರ್ನಾಟಕ ಉಚ್ಚ ನ್ಯಾಯಾಲಯಕ್ಕೆ ರಿಟ್ ಅರ್ಜಿ ಸಂಖ್ಯೆ:9891/2007-(ಬಿ.ಡಿ.ಎ) ನ್ನು ಸಲ್ಲಿಸಿದ್ದು, ಉಚ್ಚ ನ್ಯಾಯಾಲಯವು ದಿನಾಂಕ 18-03-2006ರಂದು ಈ ಕೆಳಗೆ ಕಾಣಿಸಿರುವಂತೆ ಆದೇಶ ನೀಡಿರುತ್ತದೆ.

> **(9)** The only direction that can be issued to the 1st respondent is to consider the petitioner's case for alternative allotmen t in accordance with law and subject to the availability of the sites/plots. The 1st respondent shall consider the case of the petioner meaningfully appreciating that for on fault of his and immediately after the conclusion of the auction, he has been deprived of the full beneficial enjoyment of the schedule property.
>
> 10) Alternatively, if the 1st respondent fails to allot the alternative site, it isalso open to the petioner to seek just compensation for the compulsory acquisition if any, of the schedule property or any part thereof. The 2nd respondent shall take a final decision in the matter of whether the schedule property is required for a public purpose or not within an outer limit of 3 months from today. If it is required for the purpose of 2nd respondent, the 2nd respondent, within a period of 4 months from today, shall move the Government for compulsory acquisition of the property or negotiate with the petitioner for purchasing the same.

This direction is being given to ensure that the authorities do not show up inaction in the matter and take a stand after a couple of years that the land is not required for public. purpose, in which event the petitioner may put up the construction but by bearing the escalation in the cost of construction.

11) This petition is disposed of, No.order as to costs.

ಈ ಪ್ರಕರಣದಲ್ಲಿ ಉಚ್ಚ ನ್ಯಾಯಾಲಯವು ನೀಡಿರುವ ತೀರ್ಪಿನ ಹಿನ್ನೆಲೆಯಲ್ಲಿ ತೆಗೆದುಕೊಳ್ಳಬೇಕಾದ ಮುಂದಿನ ಕ್ರಮದ ಬಗ್ಗೆ ಅಯುಕ್ತರು, ಬೃ.ಬೆಂ.ಮ.ನ.ಪಾಲಿಕೆ, ಇವರ ಅಧ್ಯಕ್ಷತೆಯಲ್ಲಿ ದಿನಾಂಕ: 28-05-2008ರಂದು ಸಭೆ ನಡೆದು, ಈ ಸಭೆಗೆ ಅಭಿಯಂತರರು ಸದಸ್ಯರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಮತ್ತು ಇತರೆ ನಾಲ್ಕು ಜನ ಅಧಿಕಾರಿಗಳು ಕೂಡ ಹಾಜರಾಗಿರುತ್ತಾರೆ.

ಈ ಹಿನ್ನೆಲೆಯಲ್ಲಿ ಈ ಪ್ರಕರಣದಲ್ಲಿ ಉಚ್ಚ ನ್ಯಾಯಾಲಯವು ನೀಡಿರುವ ತೀರ್ಪಿನ ಸಾಧಕಬಾಧಕಗಳನ್ನು ಚರ್ಚಿಸಿ, ಸಭೆಯಲ್ಲಿ ಹಾಜರು ಇದ್ದ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಅಭಿಯಂತರರ ಸದಸ್ಯರಿಗೆ ಆಯುಕ್ತರಿಗೆ ಸಲಹೆ ನೀಡುತ್ತಾ, ಈ ಪ್ರಕರಣದಲ್ಲಿ ಉಚ್ಚ ನ್ಯಾಯಾಲಯದ ನಿರ್ದೇಶನದಂತೆ, ಬದಲಿ ನಿವೇಶನ ಕೊಡುವ ಬಗ್ಗೆ ಪರಿಶೀಲಿಸಲು ತಿಳಿಸಿದರು. ಇದಕ್ಕೆ ಪ್ರತಿಕ್ರಿಯಿಸುತ್ತಾ ಶ್ರೀ.ಪಿ.ಎನ್.ನಾಯಕ್, ಬಿ.ಡಿ.ಎ, ಅಭಿಯಂತರರ ಸದಸ್ಯರ ರವರು ಬದಲಿ ನಿವೇಶನವನ್ನು ಕೊಡಲು ಸಾಧ್ಯವಿಲ್ಲವೆಂದು, ಅವರಲ್ಲಿ ಯಾವುದೇ ನಿವೇಶನಗಳು ಇಲ್ಲವೆಂದು, ಇದಕ್ಕೆ ಸಂಬಂಧಪಟ್ಟಂತೆ ಉತ್ತರವನ್ನು ಕೂಡಲೇ ಕಳುಹಿಸುವುದಾಗಿ ಸೂಚಿಸಿದರು. ಈ ಹಿನ್ನೆಲೆಯಲ್ಲಿ ಬದಲಿ ನಿವೇಶನ ಇಲ್ಲದೇ ಇರುವುದರಿಂದ, ನ್ಯಾಯಾಲಯದ ನಿರ್ದೇಶನದಂತೆ 3 ತಿಂಗಳೊಳಗಾಗಿ ಸೂಕ್ತ ಕ್ರಮ ತೆಗೆದುಕೊಳ್ಳಲು ಹಾಗೂ ಈ ನಿವೇಶನಕ್ಕೆ ಸಂಬಂಧಪಟ್ಟಂತೆ ಕೂಡಲೇ ಭೂ ಸ್ವಾಧೀನ ಪ್ರಕ್ರಿಯೆಯನ್ನು ಪ್ರಾರಂಭಿಸಲು ಆಯುಕ್ತರು ಸೂಚನೆ ನೀಡುತ್ತಾ, ಇದಕ್ಕೆ ಪ್ರಸ್ತಾವನೆಯನ್ನು ಸಿದ್ದಪಡಿಸಲು ತಿಳಿಸಿ, ಪ್ರಸ್ತಾಪನೆಯನ್ನು ಸಿದ್ದಪಡಿಸುವ ಮುಂಚೆ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದವರು ಬದಲಿ ನಿವೇಶನದ ಬಗ್ಗೆ ತಮ್ಮ ಸ್ಪಷ್ಟ ಅಭಿಪ್ರಾಯವನ್ನು ಬಿ.ಬಿ.ಎಂಪಿ.ರವರಿಗೆ ತಿಳಿಸಬೇಕೆಂದು, ತದನಂತರ ಕೂಡಲೇ ಭೂಸ್ವಾಧೀನಕ್ಕೆ ಕ್ರಮ ತೆಗೆದುಕೊಳ್ಳಲು ಸೂಚಿಸಿ ಅದರಂತೆ ನಿರ್ಣಯಿಸಿ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಮಾನ್ಯ ಉಚ್ಚ ನ್ಯಾಯಾಲಯದ ಅದೇಶದನ್ವಯ ಮತ್ತು ಆಯುಕ್ತರ, ಅಧ್ಯಕ್ಷತೆಯಲ್ಲಿ ದಿ:25-05-2008ರ ತೀರ್ಮಾನದನ್ವಯ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಶ್ರೀ.ಸಿ.ಜಿ.ಶ್ರೀನಿವಾಸ ಇವರಿಗೆ-ಬದಲಿ ನಿವೇಶನವನ್ನು ಮಂಜೂರು ಮಾಡುವ ಬಗ್ಗೆ ತಮ್ಮ ಅಭಿಪ್ರಾಯವನ್ನು ಬಿ.ಬಿ.ಎಂ.ಪಿ.ಗೆ ತಿಳಿಸಬೇಕೆಂದರೂ ಬಿ.ಡಿಎ. ರವರು ತಿಳಿಸದೇ ಇದ್ದೂದರಿಂದ ಮುನಿಸಿಪಲ್ ಖಾತೆ ನಂ:36/37ರಲ್ಲಿ ನಿವೇಶನ ಸಂಖ್ಯೆ:37ರ ನಿವೇಶನದ ಜಾಗವನ್ನು ಭೂಸ್ವಾಧೀನ ಪಡಿಸಿಕೊಳ್ಳಲು ಕ್ರಮಕೈಗೊಳ್ಳಲಾಯಿತು.

ಭೂಸ್ವಾಧೀನ ಪಡಿಸಿಕೊಳ್ಳಲು ಕಾರ್ಯಪಾಲಕ ಅಭಿಯಂತರರು,. ರಸ್ತೆ ಅಗಲೀಕರಣ ಇವರು ವರದಿ ಸಲ್ಲಿಸಿ, ನಿವೇಶನ ಸಂಖ್ಯೆ:37ರಲ್ಲಿ 5X9.15ಚ.ಮೀ. ಒಟ್ಟು 492.45ಚದರ ಅಡಿ ಜಾಗವನ್ನು ಭೂಸ್ವಾಧೀನ ಪಡಿಸಿಕೊಳ್ಳಲು ಮತ್ತು ಈ ವಿಸ್ತೀರ್ಣಕ್ಕೆ ಮಾರ್ಗಸೂಚಿ ಬೆಲೆಯನ್ನಾಧರಿಸಿ ವ್ಯಾಲ್ಯುವೇಷನ್ ಪಟ್ಟಿಯನ್ನು ಸಲ್ಲಿಸಿರುತ್ತಾರೆ. ಜೊತೆಗೆ ಭೂಸ್ವಾಧೀನ ಕಾಯ್ದೆಯಡಿಯಲ್ಲಿ ಈ ಕೆಳಕಂಡಂತೆ ಲೆಕ್ಕ ಹಾಕಿ ಮಾಲೀಕರಿಗೆ ಪರಿಹಾರ ಮತ್ತು ಇತರೇ ವೆಚ್ಚ ಪಾವತಿಸಬೇಕಾಗುತ್ತದೆ.